**CC 1096/2019**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್** 1096/2019

**ಸಿ ಡಬ್ಲೂ -6**

**ಪಿ ಡಬ್ಲೂ - 4**

| | |
|---|---|
| **ಸಾಕ್ಷಿಯ ಹೆಸರು -** | **ಶಂಕರ** |
| **ತಂದೆಯ ಹೆಸರು -** | **ಸಿದ್ದಲಿಂಗಪ್ಪ** |
| **ವಯಸ್ಸು -** | **44 ವರ್ಷಗಳು** |
| **ಉದ್ಯೋಗ -** | **ಲಾರಿ ಮಾಲೀಕ** |
| **ವಾಸಸ್ಥಳ -** | **ಹೊಸಪೇಟೆ** |

**ಸಾಕ್ಷಿಯನ್ನು ದಿನಾಂಕಃ** 07-08-2025 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಆರೋಪಿಯ ಕೈ ಬರಹದ ಜಪ್ತು ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿಃ **16** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **16 (**ಎ**)** ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು **2019** ರಲ್ಲಿ ಪಟ್ಟಣ ಪೋಲಿಸ ಠಾಣೆಯಲ್ಲಿ ಮಾಡಿರುತ್ತೇನೆ. ಸದರಿ ಪಂಚನಾಮೆಗೆ ಬಿ ಡಿ ಸಿ ಸಿ ಬ್ಯಾಂಕ್ ನಲ್ಲಿ ಮೋಸ ವಂಚನೆ ಆಗಿದೆ ಎಂಬ ಪ್ರಕರಣದ ಪಂಚನಾಮೆ ಮಾಡಿದಾಗ ಸಹಿ ಮಾಡಿರುತ್ತೇನೆ. ಪೋಲಿಸರು ನನ್ನ ಸಮಕ್ಷಮ ಆರೋಪಿಯ ಸಹಿಗಳನ್ನು ತನಿಖೆಗಾಗಿ ಸಂಗ್ರಹಿಸಿದಾಗ ಸದರಿ ಪಂಚನಾಮೆಯನ್ನು ಮಾಡಿರುತ್ತಾರೆ. ಸದರಿ ಸಹಿ ಮಾಡಿದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ವ್ಯಕ್ತಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಕೆ., ವಕೀಲರಿಂದ**

ನನಗೆ ಪೋಲಿಸರು ಪರಿಚಯ ಇದ್ದದ್ದರಿಂದ ನಾನು ಠಾಣೆಯ ಹತ್ತಿರ ಇದ್ದಾಗ ಅವರೇ ನನ್ನನ್ನು ಠಾಣೆಗೆ ಕರೆಸಿಕೊಂಡಿದ್ದರು. ನಾನು ಸಾಕಷ್ಟು ಪಂಚನಾಮೆಗಳಿಗೆ ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಯಾರು ಬರೆದರು, ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಮಲ್ಲೇಶಪ್ಪ ಪೋಲಿಸರು ಬರೆದಿರುತ್ತಾರೆ. ಸದರಿ ಪಂಚನಾಮೆಗೆ ನಾನು ಮತ್ತು ಚಾಸಾ -7 ರವರು ಸಹಿ ಮಾಡಿರುತ್ತೇವೆ. ಪ್ರಕರಣಕ್ಕೂ ಮೊದಲು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ನೋಡಿರಲಿಲ್ಲ ಮತ್ತು ಅವರ ಪರಿಚಯ ನನಗೆ ಇರುವುದಿಲ್ಲ ಅಂದರೆ ಸರಿ. ಆತ ಪಂಚನಾಮೆಗೂ ಮೊದಲೂ ಯಾವ ರೀತಿ ಸಹಿ ಮಾಡುತ್ತಿದ್ದ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ. ಪಂಚನಾಮೆ ಮಾಡಿದ ಸ್ಥಳದ ಚೆಕ್ ಬಂದಿ ನನಗೆ ಹೇಳಲು ಆಗುವುದಿಲ್ಲ. ಸಹಿ ಮಾಡಲು ಉಪಯೋಗಿಸಿದ ಪೆನ್ನು ಯಾವುದು ಮತ್ತು ಸಹಿಗಳನ್ನು ಇಂಗ್ಲೀಷನಲ್ಲಿ ಮಾಡಿದ್ದರೋ, ಕನ್ನಡದಲ್ಲಿ ಮಾಡಿದ್ದರೋ ಎಂದು ಹೇಳಲು ಆಗುವುದಿಲ್ಲ ಅಂದರೆ ಸರಿ. ಉಪಯೋಗಿಸಿದ ಪೆನ್ನು ಸಾಧಾರಣ ಬಾಲ್ ಪೆನ್ನು ಆಗಿತ್ತು. ಎಷ್ಟು ಪುಟಗಳಲ್ಲಿ ಸಹಿಗಳನ್ನು ಪಡೆದಿರುತ್ತಾರೆ ಮತ್ತು ಯಾವ ಯಾವ ಪುಟಗಳಲ್ಲಿ ಯಾರು ಸಹಿ ಮಾಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ ಅಂದರೆ ಸರಿ. ಒಟ್ಟು ಎಷ್ಟು ಪುಟಗಳ ಮೇಲೆ ಸಹಿ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ. ಆ ಪುಟಗಳಿಗೆ ಗುರುತಿಸುವಿಕೆಗಾಗಿ ಪೋಲಿಸರು ಯಾವ ಗುರುತಿನ ಸಂಖ್ಯೆಗಳನ್ನು ನೀಡಿದ್ದರು ಎಂದು ನನಗೆ ಗೊತ್ತಿಲ್ಲ.

**CC 1096/2019**

**ಸಿ ಡಬ್ಲ್ಯೂ -6**
**ಪಿ ಡಬ್ಲ್ಯೂ - 4**

ನಾನು ಪೋಲಿಸ ಠಾಣೆಗೆ ಆಗಾಗ್ಗೆ ಹೋಗಿ ಬರುವುದರಿಂದ, ಯಾವುದೇ ಪಂಚನಾಮೆ ಆಗದಿದ್ದರೂ ಸಹ, ನನ್ನ ಸಮಕ್ಷಮ ಆರೋಪಿ ಯಾವುದೇ ಸಹಿಗಳನ್ನು ಮಾಡದಿದ್ದರೂ ಸಹ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ನಾನು 2 ಲಾರಿಗಳನ್ನು ಹೊಂದಿದ್ದೆ. ನನ್ನ ಲಾರಿಗಳಿಗೆ ಸಂಬಂಧಿಸಿ ಸಣ್ಣ ಪುಟ್ಟ ಸಮಸ್ಯೆಗಳು ಬಂದಾಗ ಪೋಲಿಸ ಠಾಣೆಗೆ ಹೋಗುವ ಪ್ರವೃತ್ತಿ ಇಟ್ಟುಕೊಂಡು ನನಗೆ ಅನುಕೂಲವಾಗಲಿ ಎಂದು ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಪಂಚನಾಮೆಗೆ ಸಂಬಂಧಿಸಿ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.